

**ಚಕ್ರವರ್ತಿ ಮತ್ತು ಅವನ ಬಳಗದವರು ತನ್ನ ಪ್ರಜೆಗಳಿಗೆ ಕಂಟಕವಾಗಿರುವ ವೈರಿಯನ್ನು ಹೊಡೆದುರುಳಿಸುವ ಸಾಮರ್ಥ್ಯದ ಜೊತೆಗೆ ಜಾತಿ, ಮತ, ಧರ್ಮ, ಅಂತಸ್ತು ನೋಡದೆ ತನ್ನ ರಾಜ್ಯದ ಸರ್ವ ಪ್ರಜೆಗಳನ್ನು ರಕ್ಷಿಸುವಂಥ ಅಂತಃಕರಣದ ರಾಜಧರ್ಮವನ್ನು ಹೊಂದಿರಬೇಕು. ಅಧಿಕಾರಕ್ಕಿಂತ ಮಾನವೀಯತೆ ದೊಡ್ಡದು.**

ಮಗ್ನಗೊಂಡ ದೊರೆಯ ಮನಸ್ಸು ಎರಡು ವರ್ಷಗಳ ಹಿಂದೆ ನರ್ಮದಾ ತೀರದಲ್ಲಿ ನಡೆದಂತಹ ಘಟನೆಗಳ ನೆನಪುಗಳತ್ತ ಜಾರಿತು.

***

ಪುಲಕೇಶಿ ಚಾಲುಕ್ಯ ಚಕ್ರವರ್ತಿಯಾಗಿ ಪಟ್ಟವೇರಿದ ಕೆಲವೇ ಸಮಯದಲ್ಲಿ ತನ್ನ ಸಾಮ್ರಾಜ್ಯದ ಮೇಲೆ ದಾಳಿ ಮಾಡಲು ಹವಣಿಸಿದ ರಾಷ್ಟ್ರಕೂಟರ ಅಪ್ಪಾಯಕ, ಗೋವಿಂದರ ದಾಳಿಯನ್ನು ಸಮರ್ಥವಾಗಿ ಹಿಮ್ಮೆಟ್ಟಿಸಿದ. ಕದಂಬ, ಅಲೂಪ, ಗಂಗರನ್ನು ಗೆದ್ದು ಸಾಮಂತರನ್ನಾಗಿ ಮಾಡಿಕೊಂಡು ದಕ್ಷಿಣದಲ್ಲಿ ತನ್ನ ಸಾಮ್ರಾಜ್ಯ ವಿಸ್ತರಿಸಿದ. ತಾನಾಗಿಯೇ ಚಾಲುಕ್ಯ ಸಾಮ್ರಾಜ್ಯದ ಮೇಲೆ ಕಣ್ಣಿಟ್ಟು ವಾತಾಪಿಯನ್ನು ವಶಪಡಿಸಿಕೊಳ್ಳಲು ಬಂದ ಪಲ್ಲವ ಮಹೇಂದ್ರವರ್ಮನೂ ಪುಲಕೇಶಿ ಕಲಿತನಕ್ಕೆ ಶರಣಾಗತನಾಗಿದ್ದ. ತದನಂತರ ಉತ್ತರದ ಲಾಟರು, ಗೂರ್ಜರರು, ಮಾಳವರನ್ನು ಸೋಲಿಸಿ ಚಾಲುಕ್ಯ ಸಾಮ್ರಾಜ್ಯವನ್ನು ಉತ್ತರದಲ್ಲೂ ಹರಡಿಸಿದ. ಬಿಡುವಿಲ್ಲದೆ ರಣರಂಗದಲ್ಲಿಯೇ ಸಾಕಷ್ಟು ಸಮಯ ಕಳೆದ ಅವನ ಸೈನ್ಯವು ಸ್ವಲ್ಪ ದಿನ ವಿಶ್ರಾಂತಿಯಲ್ಲಿ ಇದ್ದಂತಹ ಸಮಯವದು. ಆ ಹೊತ್ತಿನಲ್ಲಿಯೇ ಗೂಢಚಾರರಿಂದ ಬಂದ ಸುದ್ದಿ. ಕನೌಜಿನ ಹರ್ಷವರ್ಧನನು ಚಾಲುಕ್ಯ ಸಾಮ್ರಾಜ್ಯದ ಮೇಲೆ ಕಣ್ಣಿಟ್ಟು ದಕ್ಷಿಣದತ್ತ ಬರುತ್ತಿದ್ದಾನೆಂಬ ಮಾಹಿತಿಯಿಂದ ಪುಲಕೇಶಿ ಮತ್ತೇ ಸಮರಕ್ಕೆ ಸನ್ನದ್ಧನಾಗಬೇಕಾಯಿತು. ಈಗಾಗಲೇ ಉತ್ತರಾಪಥೇಶ್ವರನೆಂದು ನಾಮಾಂಕಿತನಾದ ಹರ್ಷನನ್ನು ಯುದ್ಧದಲ್ಲಿ ಸೋಲಿಸುವುದು ಸಾಮಾನ್ಯ ವಿಷಯವಾಗಿರಲಿಲ್ಲ. ತನ್ನ ಸೈನ್ಯವು ಬಿಡುವಿರದ ಯುದ್ಧಗಳಲ್ಲಿ ಭಾಗವಹಿಸಿ ಅನೇಕ ಚಕ್ರವರ್ತಿಗಳನ್ನು ಸೋಲಿಸಿ ಸುಧಾರಿಸಿಕೊಳ್ಳುತ್ತಿತ್ತು. ಇಂತಹ ಸಂದಿಗ್ಧ ಸಮಯದಲ್ಲಿ ಹರ್ಷವರ್ಧನ ಚಾಲುಕ್ಯ ಸಾಮ್ರಾಜ್ಯದ ಮೇಲೆ ಸಮರಕ್ಕೆ ಬರುತ್ತಿರುವುದು ದೊರೆಗೆ ರಣಾಂಗಣಕ್ಕೆ ಇಳಿಯದೆ ಬೇರೆ ದಾರಿಯೇ ಇರಲಿಲ್ಲ. ಈಗ ವರ್ಧನ ದೊರೆಯ ಪ್ರಬಲ ಸೈನ್ಯದ ದಕ್ಷಿಣದ ದಂಡಯಾತ್ರೆಯನ್ನು ತಡೆಯಬೇಕಾಗಿತ್ತು. ನಿಜ, ಚಾಲುಕ್ಯರ 'ಅಜೇಯಬಲ' ಸೇನೆ ಕದನಭೂಮಿಯಲ್ಲಿ ಯಾವತ್ತೂ ವೀರಾಗ್ರಣಿಯೆ. ಈಗ ಹರ್ಷನನ್ನು ಸೋಲಿಸುವ ಅನಿರೀಕ್ಷಿತ ಸಮರಕ್ಕೆ ಚಾಲುಕ್ಯ ಸೇನೆ ಸಿದ್ಧವಾಗಬೇಕಾಯಿತು.

ಹರ್ಷನೊಂದಿಗೆ ಮುಖಾಮುಖಿಯಾಗಲು ತನ್ನ ಅಪಾರ ಸೈನ್ಯದೊಂದಿಗೆ ಉತ್ತರದತ್ತ ಮುಖ ಮಾಡಿದ ರಾಜ ಪುಲಕೇಶಿ. ಎರಡು ಪ್ರಬಲ ಸೈನ್ಯಗಳಿಗೆ ನರ್ಮದೆಯ ದಡವೇ ರಣಾಂಗಣವಾಯಿತು. ಪುಲಕೇಶಿ ಹರ್ಷವರ್ಧನರ ಸೈನ್ಯಗಳೆರಡು ವೀರಾವೇಶದಿಂದ ಹೋರಾಡಿದವು. ಈ ಘೋರ ಸಮರದಲ್ಲಿ ಒಮ್ಮೆ ಪುಲಕೇಶಿಯ ಕೈ ಮೇಲಾದರೆ ಮತ್ತೊಮ್ಮೆ ಹರ್ಷವರ್ಧನ ಮೇಲುಗೈ ಸಾಧಿಸುತ್ತಿದ್ದ. ಇಬ್ಬರೂ ಮದಗಜಗಳೇ. ಎರಡು ಮದ್ದಾನೆಗಳ ಪ್ರಬಲ ಶಕ್ತಿಯ ದ್ಯೋತಕವೆಂಬಂತೆ ಎರಡು ಬದಿಯ ಸೈನಿಕರ ಹೆಣಗಳು ಬಾಳೆ ದಿಂಡಿನಂತೆ ಉರುಳುತ್ತಿದ್ದವು. ಯುದ್ಧದಲ್ಲಿ ಹತರಾದ ಎರಡು ಸೈನಿಕರ ರಕ್ತದಿಂದ